ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1533/2024

| | | | |
|---|---|---|---|
| ಹೆಸರು | : | ಗೋಪಿನಾಥ್ ವಿ | ಸಿ .ಡಬ್ಲ್ಯೂ :17 |
| ತಂದೆ ಹೆಸರು | : | ಟಿ ವೀರಕೆಂಪಯ್ಯ | ಪಿ .ಡಬ್ಲ್ಯೂ :5 |
| ವಯಸ್ಸು | : | 55 ವರ್ಷ | |
| ಉದ್ಯೋಗ | : | PI, VIP ಭದ್ರತಾ ವಿಭಾಗ , ಬೆಂಗಳೂರು | |
| ವಾಸಸ್ಥಳ | : | ಬೆಂಗಳೂರು | |

ಸಾಕ್ಷಿಯನ್ನು ದಿಃ 27-10-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 28-01-2023 ರಿಂದ ದಿಃ 16-02-2025 ರವರೆಗೆ ಗುಬ್ಬಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ .

ದಿಃ20-01-2024 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ -14 ರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿರುತ್ತೇನೆ .

ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ -3 ರವರು ತೋರಿಸಿದ ಸ್ಥಳದಲ್ಲಿ ಚಾಸಾ -11 ಮತ್ತು 12 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಸಂಜೆ 4.00 ರಿಂದ 5.00 ಗಂಟೆಯವರೆಗೆ ನಿಪಿ -2 ರಂತೆ ಸ್ಥಳ ಪಂಚನಾಮೆಯನ್ನು ನಡೆಸಿರುತ್ತೇನೆ . ಅದೇ ಸಮಯದಲ್ಲಿ ಸ್ಥಳ ಕಚ್ಚಾ ನಕ್ಷೆಯನ್ನು ತಯಾರಿಸುತ್ತೇನೆ .

ನಿಪಿ -2 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 (ಬಿ ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸ್ಥಳ ಕಚ್ಚಾ ನಕ್ಷೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -5 ಎಂದು ಸಾಕ್ಷಿ ಸಹಿಯನ್ನು ನಿಪಿ -5 (ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ - 3 ರವರ ಹೇಳಿಕೆಯನ್ನು ಪಡೆದಿರುತ್ತೇನೆ .

ದಿಃ 22-01-2024 ರಂದು ಚಾಸಾ -11 ಮತ್ತು 12 ರವರ ಸಮಕ್ಷಮ ಸಂಜೆ 4.00 ರಿಂದ 4.45 ಗಂಟೆಯವರೆಗೆ ಗುಬ್ಬಿ ಠಾಣಾ ಆವರಣದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಒಂದು ಹೋಂಡಾ ಆಕ್ಟೀವಾ ಬೈಕ್ ಮತ್ತು ಒಂದು ಕ್ಯಾಂಟರ್ ವಾಹನ ವಶಕ್ಕೆ ಪಡೆದು ಜಪ್ತು ಪಂಚನಾಮೆ ಕ್ರಮ ಜರುಗಿಸಿದ್ದೇನೆ .

ನಿಪಿ -6 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -6 (ಎ ) ಎಂದು ಗುರುತಿಸಲಾಯಿತು. ವಾಹನಗಳ ವಿವರಗಳನ್ನು ಮಾಲು ಪಟ್ಟಿಯಲ್ಲಿ

ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ 4 ಛಾಯಾ ಚಿತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ ಕಂಡುಬರುವ ವಾಹನಗಳನ್ನು ಗುರುತಿಸಿದ್ದಾರೆ . (ಭಾರತ ಸಾಕ್ಷ್ಯ ಅಧಿನಿಯಮ ಕಲಂ 65 (ಬಿ)ರಡಿಯಲ್ಲಿ ಪ್ರಮಾಣ ಪತ್ರವನ್ನು ಸೂಕ್ತ ರೀತಿಯಲ್ಲಿ ಸಲ್ಲಿಸಿಲ್ಲದ ಕಾರಣ ಛಾಯಾಚಿತ್ರಗಳನ್ನು ನಿಶಾನೆಗಳಾಗಿ ಗುರುತಿಸಿಲ್ಲ).

ದಿಃ 23-01-2024 ರಂದು ಅಪಘಾತಪಡಿಸಿದ ವಾಹನಗಳನ್ನು ಐಎಂವಿ ತಪಾಸಣೆಗೆ ಒಳಪಡಿಸಲು ಆರ್ ಟಿ ಓ ನವರಿಗೆ ಮನವಿ ಸಲ್ಲಿಸಿರುತ್ತೇನೆ .

ದಿಃ 24-01-2024 ರಂದು ಕ್ಯಾಂಟರ್ ನ ಮಾಲೀಕರಾದ ನಾಗರಾಜು ರವರಿಗೆ ಕಲಂ 133 ಐ ಎಂ ವಿ ನೋಟಿಸ್ ನೀಡಿ ಉತ್ತರವನ್ನು ಪಡೆದುಕೊಂಡಿರುತ್ತೇನೆ . ಆ ದಿನ ಆರೋಪಿತರು ವಾಹನ ಚಲಾಯಿಸುತ್ತಿದ್ದರು ಎಂದು ಉತ್ತರದಲ್ಲಿ ತಿಳಿಸಿದ್ದಾರೆ . ಅವರಿಂದ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದಿದ್ದೇನೆ . ಆರೋಪಿತರನ್ನು ಅವರೇ ಹಾಜರುಪಡಿಸಿದ್ದು ಆರೋಪಿತರ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಮೀನಿನ ಮೂಲಕ ಬಿಡುಗಡೆ ಮಾಡಿರುತ್ತೇನೆ . ಆರೋಪಿತರನ್ನು ನೋಡಿ ಸಾಕ್ಷಿಯು ಗುರುತಿಸಿದ್ದಾರೆ .

ಸಾಕ್ಷಿಗೆ ನೋಟಿಸ್ ಮತ್ತು ಉತ್ತರವನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ - 7 ಮತ್ತು 8 ಎಂದು ಸಾಕ್ಷಿ ಸಹಿಯನ್ನು ನಿಪಿ -7 (ಎ) ಮತ್ತು ನಿಪಿ -8 (ಎ) ಎಂದು ಗುರುತಿಸಲಾಯಿತು.

ಸದರಿ ವಾಹನದ ಮಾಲೀಕರಿಂದ ನಷ್ಟ ಭರ್ತಿ ಪರಿಹಾರ ಪತ್ರವನ್ನು ಪಡೆದು ವಾಹನವನ್ನು ಅವರ ವಶಕ್ಕೆ ನೀಡಿದ್ದೇನೆ .

ಸಾಕ್ಷಿಗೆ ನಷ್ಟ ಭರ್ತಿ ಪರಿಹಾರ ಪತ್ರವನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -9 ಎಂದು ಸಾಕ್ಷಿ ಸಹಿಯನ್ನು ನಿಪಿ -9 (ಎ) ಎಂದು ಗುರುತಿಸಲಾಯಿತು.

ದಿಃ 25-01-2024 ರಂದು ಮೃತ ವ್ಯಕ್ತಿ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಸಂಬಂಧಿಸಿ ಶ್ರೀಧರ್ ರವರಿಂದ ನಷ್ಟ ಭರ್ತಿ ಪರಿಹಾರ ಪತ್ರವನ್ನು ಪಡೆದು ವಾಹನವನ್ನು ಅವರ ವಶಕ್ಕೆ ನೀಡಿದ್ದೇನೆ .

ಸಾಕ್ಷಿಗೆ ನಷ್ಟ ಭರ್ತಿ ಪರಿಹಾರ ಪತ್ರವನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -10 ಎಂದು ಸಾಕ್ಷಿ ಸಹಿಯನ್ನು ನಿಪಿ -10 (ಎ) ಎಂದು ಗುರುತಿಸಲಾಯಿತು.

ದಿಃ 05-02-2024 ರಂದು ಚಾಸಾ -2 ಮತ್ತು 4 ರವರ ಹೇಳಿಕೆ ಪಡೆದಿರುತ್ತೇನೆ .

ಅದೇ ದಿನ ತುಮಕೂರಿನ ಆರ್ ಟಿ ಓ ರವರಿಂದ ವಾಹನಗಳ IMV ವರದಿಯನ್ನು ಪಡೆದಿರುತ್ತೇನೆ .

ಸಾಕ್ಷಿಗೆ IMV ವರದಿಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -11 ಎಂದು ಸಾಕ್ಷಿ ಸಹಿಯನ್ನು ನಿಪಿ -11 (ಎ) ಎಂದು ಗುರುತಿಸಲಾಯಿತು.

ದಿಃ 08-02-2024 ಗುಬ್ಬಿಯ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತರ ಪಿ ಎಂ ವರದಿಯನ್ನು ಪಡೆದಿರುತ್ತೇನೆ .

ದಿಃ 23-02-2024 ರಂದು ತನಿಖಾ ಸಹಾಯಕರಾದ ಶ್ರೀನಿವಾಸ ಮೂರ್ತಿ ರವರಿಂದ (ಭಾರತ ಸಾಕ್ಷ್ಯ ಅಧಿನಿಯಮ ಕಲಂ 65 (ಬಿ)ರಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದಿದ್ದೇನೆ ).

ನಂತರ ತನಿಖೆ ಪೂರ್ಣಗೊಂಡಿದ್ದು ಆರೋಪಿತರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ನಿಪಿ -5 ರಲ್ಲಿ ಅದನ್ನು ತಯಾರಿಸಿದ ದಿನಾಂಕ ಮತ್ತು ಸ್ಥಳದ ವಿವರಗಳನ್ನು ನಮೂದಿಸಿಲ್ಲ ಎಂದರೆ ಸರಿ . ನಿಪಿ -5 ನ್ನು ಠಾಣೆಯಲ್ಲಿ ಕುಳಿತು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನಡೆದ ರಸ್ತೆಯಲ್ಲಿ ಹಲವು ಗುಂಡಿಗಳು ಇದ್ದವು ಎಂದರೆ ಸರಿ . ನಿಟ್ಟೂರಿನಿಂದ ಸಂಪಿಗೆಗೆ ಹೋಗುವ ರಸ್ತೆ ಪೂರ್ವ ಪಶ್ಚಿಮಾಭಿಮುಖವಾಗಿದೆ ಎಂದರೆ ಸರಿ . ಬಾಡೇನಹಳ್ಳಿಗೆ ಹೋಗುವ ರಸ್ತೆ ಪಶ್ಚಿಮಕ್ಕೆ ಇದೆ ಎಂದರೆ ಸರಿ . ಬಾಡೇನಹಳ್ಳಿಗೆ ಹೋಗುವ ಸಮಯ ವಾಹನಗಳನ್ನು ನಿಧಾನವಾಗಿ ಪಶ್ಚಿಮವಾಗಿ ತಿರುಗಿಸಬೇಕು ಎಂದರೆ ಸರಿ . ಬಾಡೇನಹಳ್ಳಿಯಿಂದ ಬಂದು ನಿಟ್ಟೂರು ರಸ್ತೆಗೆ ಸೇರಲು ಪಶ್ಚಿಮದಿಂದ ಪೂರ್ವದ ದಿಕ್ಕಿಗೆ ತಿರುವು ಪಡೆಯುವಾಗ ದ್ವಿ ಚಕ್ರ ವಾಹನದ ಸವಾರರು ರಸ್ತೆಯಲ್ಲಿರುವ ಗುಂಡಿಯನ್ನು ನಿಯಂತ್ರಿಸಲು ಸಾಧ್ಯವಾಗದೇ ಆಯ ತಪ್ಪಿ ಕೆಳಕ್ಕೆ ಬಿದ್ದುದರಿಂದ ತಲೆಗೆ ಪೆಟ್ಟಾಗಿ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯ ಸ್ವಯಂ ತಪ್ಪಿನಿಂದ ಈ ಅಪಘಾತವಾಗಿದೆಯೇ ವಿನಃ ಆರೋಪಿತರ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ , ಆದರೂ ಸಹಾ ಆರೋಪಿತರ ವಿರುದ್ದ ಸುಳ್ಳು ವಿವರಗಳ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಯಾವ ಪ್ರಿಂಟರ್ ನ ಸಹಾಯದಿಂದ ಯಾವ ಸ್ಥಳದಲ್ಲಿ ಪಂಚನಾಮೆಯನ್ನು ಮುದ್ರಿಸಿದ್ದೀರಾ ಎಂದರೆ ಸಾಕ್ಷಿಯು ಠಾಣೆಯ ಪ್ರಿಂಟರ್ ನ್ನು ಚಾರ್ಜ್ ಮಾಡಿಕೊಂಡು ಸ್ಥಳಕ್ಕೆ ತೆಗೆದುಕೊಂಡು ಹೋಗಿದ್ದೇವೆ , ಅದರಿಂದಲೇ ಸ್ಥಳದಲ್ಲಿ ಪಂಚನಾಮೆಯನ್ನು ಮುದ್ರಿಸಿದ್ದೇವೆ ಎಂದು ತಿಳಿಸಿದ್ದಾರೆ . ಯಾವ ಕಂಪನಿಯ ಪ್ರಿಂಟರ್ ಎಂದು ಹೇಳಲು ನೆನಪಾಗುತ್ತಿಲ್ಲ . ನಿಪಿ -2 ಮತ್ತು 5 ನ್ನು ಠಾಣೆಯನ್ನು ತಯಾರಿಸಿ ಅಲ್ಲಿಯೇ ಸಾಕ್ಷಿದಾರರ ಸಹಿ ಪಡೆದಿದ್ದೇನೆ

ಎಂದರೆ ಸರಿಯಲ್ಲ. ಪಂಚನಾಮೆಗೆ ಹಾಜರಾಗಬೇಕೆಂದು ಪಂಚರಿಗೆ ನೋಟಿಸ್ ನೀಡಿದ್ದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ . ನಾನು ಸರಿಯಾದ ರೀತಿಯಲ್ಲಿ ತನಿಖೆ ನಡೆಸದೆ ಮೃತ ವ್ಯಕ್ತಿಯ ಕುಟುಂಬಕ್ಕೆ ಸಹಾಯವಾಗಲೆಂದು ಆರೋಪಿತರ ವಿರುದ್ದ ಸುಳ್ಳು ವಿವರಗಳ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.